ಪಿ ಡಬ್ಲ್ಯೂ ಃ **1**

ಸಾಕ್ಷಿಗೆ ದಿನಾಂಕಃ **26.03.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ವಾದಿ ಪರಃ ವಕೀಲರ ಮೂಲಕ ಃ</u>**

ನಾನು ಈ ದಿನ ನನ್ನ ಮುಖ್ಯ ವಿಚಾರಣಾ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ **21.03.2018** ರ ಕ್ರಯದ ಒಪ್ಪಂದದ ಕರಾರಿನ ಮೂಲ ಪ್ರತಿಯನ್ನು ನಿಪಿ-**1** ಎಂದು, ಸದರಿ ದಾಖಲೆಯನ್ನು ಪ್ರತಿವಾದಿಯು ಬರೆದುಕೊಟ್ಟಿರುತ್ತಾರೆ ಎಂದು ಸಾಕ್ಷಿಯು ಅವರ ಸಹಿಯನ್ನು ಗುರುತಿಸಿದ ಕಾರಣ ಅದನ್ನು ನಿಪಿ-**1**ಎ ಎಂದು, ಸಾಕ್ಷಿದಾರರಾಗಿ ರಮೇಶ್ ಮತ್ತು ಉಮೇಶ್ ರಾಜೇ ಅರಸ್ ರವರು ಸಹಿ ಮಾಡಿರುತ್ತಾರೆ ಎಂದು ಸಾಕಯು ನೋಡಿ ಗುರುತಿಸಿದ್ದು, ಅವರುಗಳ ಸಹಿಗಳನ್ನು ನಿಪಿ-**1**ಬಿ ಮತ್ತು ನಿಪಿ-**1**ಸಿ ಎಂದು, ರಮೇಶ್ ಎಂಬುವವರು ಪತ್ರ ತಯಾರು ಮಾಡಿರುತ್ತಾರೆ ಎಂದು ಅವ ರ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-**1**ಡಿ ಎಂದು, ಋಣಭಾರ ರಾಹಿತ್ಯ ಪ್ರಮಾಣಪತ್ರವನ್ನು ನಿಪಿ-**2** ಎಂದು, ಇ - ಸ್ವತ್ತಿನ ಪ್ರತಿಯನ್ನು ನಿಪಿ-**3** ಎಂದು, ದಿನಾಂಕ **03.03.2021** ರ ತಿಳುವಳಿಕೆ ನೋಟೀಸನ್ನು ನಿಪಿ-**4** ಎಂದು, ಎರಡು ಅಂಚೆ ರಶೀತಿಗಳನ್ನು ನಿಪಿ-**5** ಮತ್ತು **6** ಎಂದು, ಜಾರಿಯಾಗದೇ ವಾಪಸ್ಸು ಅದ ಎರಡು ಅಂಚೆ ಲಕೋಟೆಗಳನ್ನು ನಿಪಿ-**7** ಮತ್ತು **8** ಎಂದು, ಸದರಿ ಅಂಚೆ ಲಕೋಟೆಗಳನ್ನು ತೆರೆದು ನೋಡಲಾಗಿ ಅದರ ಒಳಗಡೆ ಇರುವ ನೋಟೀಸಿನ ಪ್ರತಿಗಳನ್ನು ನಿಪಿ-**7**ಎ ಮತ್ತು ನಿಪಿ-**8**ಎ ಎಂದು, ವಂಶವೃಕ್ಷದ ಪ್ರಮಾಣಪತ್ರ ವನ್ನು ನಿಪಿ-**9** ಎಂದು, ನನ್ನ ಪತಿಯ ಮರಣ

ಪ್ರಮಾಣಪತ್ರವನ್ನು ನಿಪಿ**-10** ಎಂದು**, 4** ಅಧಾರ ಕಾರ್ಡುಗಳ ನೋಟರಿಕೃತ ಪ್ರತಿಗಳನ್ನು ನಿಪಿ**-11** ರಿಂದ ನಿಪಿ**-14** ಎಂದು ಗುರುತಿಸಲಾಯಿತು**.**

ವಕೀಲರ ವಿನಂತಿ ಮೇರೆಗೆ ಪಾಟೀಸವಾಲಿಗೆ ಸಮಯಾವಕಾಶ ನೀಡಿ ಮುಂದೂಡಲಾಯಿತು**.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು**.**

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆಎಂಎಫ್‌ಸಿ ಮಳವಳ್ಳಿ**.**